ಬಾಗಲಕೋಟೆಯಲ್ಲಿ ಅಗ್ನಿ ಶಾಮಕದಳ

೩೧೯. ಶ್ರೀ ಜಿ. ವಿ. ಮಂಟೂರ್ (ಬಾಗಲಕೋಟೆ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಾಗಲಕೋಟೆ ನಗರಕ್ಕೆ ಅಗ್ನಿಶಾಮಕ ದಳ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಬಗ್ಗೆ ಈಗಾಗಲೇ ಹಣವನ್ನು ಎಷ್ಟು ಮಂಜೂರು ಮಾಡಲಾಗಿದೆ, ಹಾಗೂ ಹಣವನ್ನು ಬಿಡುಗಡೆ ಮಾಡಲಾಗಿದೆಯೇ ?

ಇ) ಹಾಗಿದ್ದಲ್ಲಿ ಅದರ ಕಾರ್ಯವು ಪ್ರಗತಿಯಲ್ಲಿ ನಡೆಯದೇ ಇರಲು ಕಾರಣಗಳೇನು ?

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

೧೯೮೭-೮೮ನೇ ಸಾಲಿನ ಬಜೆಟ್‌ನಲ್ಲಿ ೩ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಸರ್ಕಾರದ ಮಂಜೂರಾತಿ ಸಿಕ್ಕಿಲ್ಲ. ಕಿನ್ಹೂರು ಸರ್ವೆ ನಂ. ೪೧೯ರಲ್ಲಿ ಎ ಪಿ ಎಂ ಸಿ ಯವರು ಭೂಮಿಯನ್ನು ಕೊಟ್ಟಿದ್ದಾರೆ. ಅದಕ್ಕಾಗಿ ೫೯ ಲಕ್ಷದ ೨೮ ಸಾವಿರ ರೂಪಾಯಿಗಳಷ್ಟು ಖರ್ಚು ಆಗಬಹುದೆಂದು ಅಂದಾಜು ತಯಾರು ಮಾಡಲಾಗಿದೆ. ಈ ವರ್ಷದ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಸಾಧ್ಯವಾದರೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ವಿ. ಮಂಟೂರ್.—ಬಾಗಲಕೋಟೆ ನಗರಕ್ಕೆ ಅಗ್ನಿಶಾಮಕದಳ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಇಲ್ಲವೆಂದು ಹೇಳುತ್ತಿದ್ದಾರೆ. ಬಾಗಲಕೋಟೆ ನಗರಕ್ಕೆ ಅಗ್ನಿಶಾಮಕದಳ ಮಂಜೂರು ಆಗಿದೆಯೆಂದು ಹಿಂದಿನ ಗೃಹ ಸಚಿವರು ಹೇಳಿದ್ದಾರೆ. ಬಾಗಲಕೋಟೆ ನಗರಕ್ಕೆ ೧೮ ಲಕ್ಷ ರೂಪಾಯಿಗಳು ಮಂಜೂರು ಆಗಿದೆ. ಇದರಲ್ಲಿ ೯ ಲಕ್ಷ ರೂಪಾಯಿಗಳ ಹಣವನ್ನು ಲೋಕೋಪಯೋಗಿ ಇಲಾಖೆಗೆ ಜಮಾ ಮಾಡಲಾಗಿದೆ. ಈಗ ಮಾನ್ಯ ಮಂತ್ರಿಗಳು ಗೊತ್ತಿಲ್ಲವೆಂದು ಹೇಳಿದರೆ ನಾನೇನು ಹೇಳಬೇಕು ?

ಶ್ರೀ ಆರ್. ಎಲ್. ಜಾಲಪ್ಪ.—ನಾನು ಒದಗಿಸಿರುವ ಉತ್ತರದಲ್ಲಿ ಆ ರೀತಿ ಇದೆ. ಮಾನ್ಯ ಸದಸ್ಯರಾದ ಮಂಟೂರ್‌ರವರು ಹೇಳುವುದು ನಿಜವಾದರೆ, ಯಾರು ಈ ರೀತಿ ಉತ್ತರವನ್ನು ಒದಗಿಸಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಜಿ. ವಿ. ಮಂಟೂರ್.—ಎ ಪಿ ಎಂ ಸಿ ಯವರು ಸೈಟು ಕೊಟ್ಟಿದ್ದಾರೆ. ಗೃಹ ಮಂತ್ರಿಯವರು ಸಮ್ಮತಿ ಕೊಟ್ಟರೆ ನಾವು ಇಲ್ಲಿ ಮಾಡಬಹುದೆಂದು ಲೋಕೋಪಯೋಗಿ ಇಲಾಖೆಯವರು ಹೇಳಿದ್ದಾರೆ. ಬಾಗಲಕೋಟೆ ನಗರಕ್ಕೆ ಅಗ್ನಿಶಾಮಕದಳ ಅವಶ್ಯಕತೆಯಿದೆ.

ಶ್ರೀ ಆರ್. ಎಲ್. ಜಾಲಪ್ಪ.—ಸಂಬಂಧಪಟ್ಟ ಪೈಲ್ ತರಿಸಿ ನೋಡಿ, ಆ ತರಹ ಇದ್ದರೆ ಎಷ್ಟು ಬೇಗ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೋ ಅಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇನೆ.

ಕರ್ನಾಟಕ ಲೋಕ ಸೇವಾ ಆಯೋಗದವರಿಂದ ಕೆ. ಎ. ಎಸ್. ಸ್ಪರ್ಧಾತ್ಮಕ ಪರೀಕ್ಷೆ ನಡೆಸುವ ಬಗ್ಗೆ.

೩೨೦. ಶ್ರೀ ಎ. ಎಂ. ಹಿಂಡಸಗೇರಿ (ಹುಬ್ಬಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಲೋಕ ಸೇವಾ ಆಯೋಗದವರು ಡಿಸೆಂಬರ್ ೧೯೮೮ರಲ್ಲಿ ಕೆ. ಎ. ಎಸ್. ಸ್ಪರ್ಧಾತ್ಮಕ ಪರೀಕ್ಷೆ ನಡೆಸಲು ಅರ್ಹ ಅಭ್ಯರ್ಥಿಗಳಿಗೆ ಪ್ರವೇಶ ಪತ್ರ ಕಳುಹಿಸಿದುದು ನಿಜವೇ ?